

# ಹೂಬನ

Volume 2 April 2006

HOO-BANA
Kannada Newsletter

## Inside this issue:


| | |
|---|---|
| Namma Naadu, Namma Jana | 2 |
| Shruddhanjali | 2 |
| Arogya bhagya | 3 |
| Habba Habba | 5 |
| Gaasippina Gundi | 6 |
| Chaitrada Chiguru | 7 |
| Mumbaruva karyak-ramagalu | 7 |




**ಮನಸ್ಸು ಮಾಡು, ಕರ್ತವ್ಯನಿಷ್ಠನಾಗು, ಕಾದುನೋಡು.**
**– ಸ್ವಾಮಿ ವಿವೇಕಾನಂದ.**



## ಸಂಪಾದಕರಿಂದ

ಆತ್ಮೀಯ ಕನ್ನಡ ಬಾಂಧವರೆ,

**"ವ್ಯಯನಾಮ ಸಂವತ್ಸರ ರಿಚ್ಮಂಡಿನ ಕನ್ನಡಿಗರಿಗೆ, "ಹೂಬನ"ದ ಓದುಗರಿಗೆ ಸುಖ–ಶಾಂತಿಯನ್ನು ತರಲಿ."**

ದಂಪತಿಗಳಿಬ್ಬರು ತಮ್ಮ ಹಿತ್ತಲಿನ ಕೈತೋಟದಲ್ಲಿ ಪ್ರತಿ ವರ್ಷ ತರಕಾರಿ ಬೆಳೆಯುತ್ತಲಿದ್ದರು. ಆ ಒಂದು ವರ್ಷ ಅನಾರೋಗ್ಯ ಮತ್ತು ವೃದ್ಧಾಪ್ಯದಿಂದ ತರಕಾರಿ ಬೆಳೆಯಲು ತಮಗೆ ಆಗದೆಂದು ಅವರಿಗೆ ಅನಿಸಿತು. ಕಾರಣಾಂತರದಿಂದ ಅವರಿಗಿದ್ದ ಒಬ್ಬನೇ ಮಗ ಜೇಲಿನಲ್ಲಿದ್ದ. ತಂದೆ ಮಗನಿಗೆ "ಈ ಸಾರೆ ಹಿತ್ತಲಿನಲ್ಲಿ ತರಕಾರಿ ಬೆಳೆಯುತ್ತಿಲ್ಲ, ನೆಲ ಅಗೆದು ಹದಗೊಳಿಸಲು ನನ್ನಿಂದ, ನಿಮ್ಮಮ್ಮನಿಂದ ಆಗುತ್ತಿಲ್ಲ. ನೀನಾದರೂ ಇಲ್ಲಿ ಇದ್ದಿದ್ದರೆ ನೆಲ ಹದಗೊಳಿಸಿ ಕೊಡುತ್ತಿದ್ದೆ." ಎಂದು ಕಾಗದ ಬರೆದ. "ಅಪ್ಪಾ, ದಯವಿಟ್ಟು ಹಿತ್ತಲಿನ ನೆಲ ಹದಗೊಳಿಸಲು ಅಗೆಯಬೇಡಿ. ಏಕೆಂದರೆ ಅಲ್ಲಿ ನಾನು ಬಂದೂಕುಗಳನ್ನು ಹೂತಿಟ್ಟಿದ್ದೇನೆ" ಎಂದು ಮಗ ಉತ್ತರಿಸಿದ. "ಯಾಕೆ ಹೀಗೆ ಬರೆದ" ಎಂದು ದಂಪತಿಗಳು ಆಲೋಚಿಸುತ್ತಿರುವಾಗ ಪೋಲೀಸರು ಬಂದು ಸರಸರನೇ ಹಿತ್ತಲನ್ನೆಲ್ಲ ಅಗೆದು ಬಂದೂಕುಗಳ ಸುಳಿವು ಸಿಗದೇ ಹೋದರು. ತಂದೆಗೆ ಇದೆಲ್ಲ ಏನಾಯಿತೆಂದು ತಿಳಿಯಲಿಲ್ಲ. ಮಗನಿಗೆ "ಹೀಗೇಕೆ ಪತ್ರ ಬರೆದೆ?" ಎಂದು ಕೇಳಿದ. ಅದಕ್ಕೆ ಆ ಮಗ "ಜೇಲಿನಲ್ಲಿದ್ದ ನಾನು ಇದಕ್ಕಿಂತ ಬೇರೆ ಯಾವ ರೀತಿಯಿಂದಲೂ ನಿಮಗೆ ಸಹಾಯ ಮಾಡಲಾರೆ." ಎಂದ. ಬಂದೂಕುಗಳ ಕಾರಣದಿಂದ ಆ ದಂಪತಿಗಳ ತರಕಾರಿಗಳ ತೋಟ ತಯಾರಾಯಿತು!

"ಹೂಬನ"ದ ನಾಲ್ಕನೆಯ ಸಂಚಿಕೆಯನ್ನು(ತಡವಾಗಿದ್ದಕ್ಕೆ ಕ್ಷಮೆಕೋರುತ್ತ) ಹೊರತರಲು ನಮಗೆ ತುಂಬಾ ಹೆಮ್ಮೆ ಅನಿಸುತ್ತಿದೆ. ಆದರೆ ಇಲ್ಲಿಯವರೆಗೆ ನಾವೇ ಮೂರು–ನಾಲ್ಕು ಜನ ಬರೆದು, ಓದುತ್ತಿದ್ದೇವೇನೋ ಎಂದು ಅನಿಸುತ್ತಿದೆ. ಸಮಯದ ಅಭಾವದಿಂದ ನಿಮಗೆಲ್ಲ ಯಾವದೇ ಲೇಖನ ಬರೆಯಲು ಆಗಿರಲಿಕ್ಕಿಲ್ಲ. ಆದರೆ "ಹೂಬನ"ವನ್ನು ಓದಿ ನಿಮ್ಮ ಅನಿಸಿಕೆಯನ್ನು ಎರಡು ಸಾಲು ಬರೆದು ತಿಳಿಸಿದರೂ ಸಂತೋಷವಾಗುತ್ತದೆ. ವಿವೇಕಾನಂದರ ಘೋಷಣೆಯನ್ನು ಅನುಸರಿಸಿ, ಮೇಲಿನ ಕಥೆಯನ್ನು ಮೆಲುಕುಹಾಕುತ್ತ "ಹೂಬನ"ಕ್ಕೆ ಬರೆಯಿರಿ.

ತಮ್ಮ ಬಿಡುವಿಲ್ಲದ ಕೆಲಸದ ಮಧ್ಯೆಯೂ "ಹೂಬನ"ಕ್ಕಾಗಿ ಡಾ. ಅಶೋಕಕುಮಾರವರು ಹೃದಯದ ಆರೋಗ್ಯಕ್ಕೆ ಸಂಬಂಧಿಸಿದ ಸುದೀರ್ಘ ಲೇಖನಮಾಲೆಯನ್ನು ಬರೆದು ಕೊಟ್ಟರು. ಇದು ನಿಮ್ಮ ಅನೇಕ ಸಂದೇಹಗಳನ್ನು ದೂರ ಮಾಡಿ, ನಿಮ್ಮ ಆರೋಗ್ಯಕರ ಜೀವನಕ್ಕೆ ಒಂದು ಕೈಪಿಡಿಯಾಗಿದ್ದಲ್ಲಿ ನಮಗೆ ಸಂದೇಹವಿಲ್ಲ. ಡಾ. ಅಶೋಕಕುಮಾರರಿಗೆ "ಹೂಬನ" ಓದುಗರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತದೆ.

"ನಾನಿರುವುದೇ ನಿಮಗಾಗಿ, ನಾಡಿರುವದು ನಮಗಾಗಿ, ಕಣ್ಣೀರೇಕೆ? ಬಿಸಿ ಉಸಿರೇಕೆ? ಬಾಳುವಿರೆಲ್ಲ ಹಾಯಾಗಿ" ಎಂದು ಮನದುಂಬಿ ಹಾಡಿದ ನಮ್ಮೆಲ್ಲರ ಅಭಿಮಾನದ "ಅಣ್ಣ" ದೈವಾಧೀನರಾದರೆಂದು ಹೇಳಲು ಮನ ಒಪ್ಪದಾಗಿದೆ. ಅವರು ನಟಿಸಿದ ಎಲ್ಲ ಚಿತ್ರಗಳೂ ನಮ್ಮೆಲ್ಲರ ಜೀವನಕ್ಕೆ ಮಾದರಿಯಾಗಿವೆ. ನಟಶಿರೋಮಣಿಯೊಬ್ಬರನ್ನು ಕಳೆದುಕೊಂಡು ನಾವೆಲ್ಲ ಅನಾಥರಾಗಿದ್ದೇವೆ ನಿಜ. ಆದರೆ "ರಾಜ್" ಇಂದು ಭೌತಿಕ ಜಗತ್ತಿನಿಂದ ದೂರಸರಿದರೂ ಅವರು ಹಾಡಿದ ಹಾಡಿನಲ್ಲಿ, ನಟಿಸಿದ ಚಿತ್ರಗಳಲ್ಲಿ ಅವರನ್ನು ಸದಾ ನೋಡುತ್ತಿರೋಣ. ಕನ್ನಡಾಂಬೆಯ ಒಡಲಲ್ಲಿ ಮತ್ತೆ ಮತ್ತೆ "ಮುತ್ತುರಾಜ"ನಂಥ ಮುತ್ತುಗಳು ಹುಟ್ಟಿಬರಲಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ.

"ಹೂಬನ"ದ "ನಮ್ಮ ನಾಡು–ನಮ್ಮ ನುಡಿ" ಅಂಕಣದಲ್ಲಿ ಶ್ರೀನಾಥ್ ಭಲ್ಲೆಯವರು "ರಾಜ್"ರಿಗೆ ಅರ್ಪಿಸಿದ ಮನೋಜ್ಞ ಶ್ರದ್ಧಾಂಜಲಿಯನ್ನು ಓದಿರಿ.

ನಮಸ್ಕಾರಗಳು,

* We would love to hear from you. Please email to : hoobanaeditors@yahoogroups.com

## ನಮ್ಮ ನಾಡು–ನಮ್ಮ ಜನ:



ರಾಜ್ ಹಾಡುತ್ತಿದ್ದಾರೆ ಕೇಳಿ ’ಕಣ್ಣೀರ ಧಾರೆ ಇದೇಕೆ ಇದೇಕೆ ?’

"ನಾನೇ ರಾಜಕುಮಾರ" ಎಂದು ಕನ್ನಡಿಗರ ಹೃದಯಕ್ಕೆ ಲಗ್ಗೆ ಹಾಕಿದ ಮಿಸ್ಟರ್.ರಾಜ್ ಕುಮಾರ್ ಈಗ ನಮ್ಮೊಡನೆ ಇಲ್ಲವೇ? ನಂಬೋದೇ ಕಷ್ಟವಾಗಿದೆ. ಅಮೇರಿಕದಲ್ಲಿ ನೆಲೆಸಿರುವ ನಮಗೆ ಉದಯ ಟಿ.ವಿ ಯಲ್ಲಿ ಸುದ್ದಿ ನೋಡಲು ಸಂಜೆಯವರೆಗೂ ಕಾಯಬೇಕಾಯಿತು. ಒಮ್ಮೆ ’ಉದಯ’ದ ಪರದೆಯ ಮೇಲೆ ’ರಾಜ’ ’ಅಸ್ತಂಗತ’ವಾಗಿದ್ದು ತಿಳಿಸುತ್ತಲೇ ನನ್ನ ಸ್ಮೃತಿಪಟಲದಲ್ಲಿ ರಾಜ್ ಅಭಿನಯದ ಚಿತ್ರಗಳ ದೃಶ್ಯಗಳು ಹಾಗೇ ರೀಲು ಬಿಚ್ಚಿಕೊಂಡಿತ್ತು.

ಐದು ಕೋಟಿ ಕನ್ನಡಿಗರ ಹೃದಯ ಕದ್ದು ’ನಾನೊಬ್ಬ ಕಳ್ಳ’ ಎಂದು ಸಾರಿದ್ದು ಅಷ್ಟು ಸುಲಭದ ಮಾತಲ್ಲ. ಮುಖ್ಯವಾಗಿ ಪ್ರತಿ ಮನೆ/ಮನದಲ್ಲೂ ರಾಜ್ ನಿಂತಿದ್ದೇಕೆ ? ಅದಕ್ಕೆ ಕಾರಣ ಅವರ ಚಿತ್ರಗಳ ಗುಣಮಟ್ಟ ಹಾಗೂ ಅವರ ಅಭಿನಯ. ಕೆಲ ಕಾಲದ ಹಿಂದೆ ಮನೆಯ ಹಿರಿಯರು ಮಕ್ಕಳನ್ನು ಚಿತ್ರಮಂದಿರಕ್ಕೆ ಕಳಿಸಲು ಬಿಡುತ್ತಿರಲಿಲ್ಲ. ಆದರೆ ರಾಜ್ ಚಿತ್ರವಾದರೆ ತಾವೇ ಕರೆದುಕೊಂಡು ಹೋಗುತ್ತಿದ್ದರು. ಅಂದರೆ ಮನೆಮಂದಿಯೆಲ್ಲ ಒಟ್ಟಿಗೆ ಕೂತು ಅಡ್ಡಿಯಿಲ್ಲದೆ ನೋಡಬಹುದಿತ್ತು ಎಂದು ವಿಶೇಷವಾಗಿ ಹೇಳಬೇಕಿಲ್ಲವಷ್ಟೆ.

’ದಾರಿ ತಪ್ಪಿದ ಮಗ’ ಚಿತ್ರದಲ್ಲಿ ಹೆಣ್ಣಿನ ಬಗ್ಗೆ ’ಖಳನ’ ಪಾತ್ರದಲ್ಲಿ ಅವರು ಆಡಿದ ಮಾತು ಯಾರಿಗೂ ಇಷ್ಟವಾಗಿರಲಿಲ್ಲ, ’ಸಮಯದ ಗೊಂಬೆ’ ಚಿತ್ರದಲ್ಲಿ ’ಬೀಡಿ ಸೇದಿ, ಹೆಂಡ ಕುಡಿದಿದ್ದು’ ಜನ ಸಹಿಸಲಿಲ್ಲ, ಅದೇ ಚಿತ್ರದಲ್ಲಿ ಶ್ರೀನಾಥ್ ಒಂದು ದೃಶ್ಯದಲ್ಲಿ ರಾಜ್ ಕೆನ್ನೆಗೆ ಹೊಡೆದಾಗ ಕೋಲಾಹಲವೇ ಆಗಿತ್ತು. ಈ ಭಾವನೆಗಳು ಜನಕ್ಕೆ ಹೇಗೆ ಬಂತು ಎಂದರೆ ರಾಜ್ ತಮ್ಮ ಮನೆಯಲ್ಲಿ ಒಬ್ಬ ಎನ್ನುವ ಭಾವನೆ ಜನರಲ್ಲಿ ಮೂಡಿತ್ತು. ರಾಜ್‌ಗೆ ಸೋಲಾಗಬಾರದು ಎಂದು ’ಎರಡು ಕನಸು’ ಚಿತ್ರದ ಕೊನೆಯ ಸನ್ನಿವೇಶವನ್ನು ಬದಲಾಯಿಸಿದ್ದು ಎಲ್ಲರಿಗೂ ಗೊತ್ತೇ ಇದೆ. ರಾಜ್‌ಗೆ ಅನ್ಯಾಯ ಆಗುವುದು, ರಾಜ್ ಅಡ್ಡದಾರಿ ಹಿಡಿಯುವುದು ಇವೆಲ್ಲ ಜನ ಸಹಿಸುತ್ತಿರಲಿಲ್ಲ. ರಾಜ್ ಅವರಿಗಿಂತಾ ಅವರ ಅಭಿಮಾನಿಗಳಿಗೇ ಅವರು ರಾಜಕೀಯ ಪ್ರವೇಶ ಮಾಡುವುದು ಇಷ್ಟವಿರಲಿಲ್ಲ.

ಚಲನಚಿತ್ರದಲ್ಲಿ ರಾಜ್ ಸಾಯುವುದು ಜನರಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ವಿಪರ್ಯಾಸವೆಂದರೆ ಇಂದು ಅವರು ನಿಜಕ್ಕೂ ನಮ್ಮ ಜೊತೆ ಇಲ್ಲ.

"ನಾನು ನಿಮ್ಮವನು ನಿಮ್ಮ ಮನೆಯವನು’ ಎಂದು ಹಾಡಿದ ರಾಜ್ ಬಗ್ಗೆ ಕನ್ನಡಿಗರು ಇಂದು ಹಾಡುತ್ತಿರುವ ಹಾಡು ’ನಿನದೇ ನೆನಪೂ ದಿನವೂ ಮನದಲ್ಲಿ..’ ಇರಬಹುದೇ ಅಥವಾ ’ನಿನ್ನಾ ಮರಯಲಾರೆ..’ ಇರಬಹುದೇ? ಚಿತ್ರದಲ್ಲಿ ನೋಡುವುದೆಲ್ಲ ನಿಜವಾಗಿದ್ದಲ್ಲಿ ಇಂದು ಈ ’ಕಾಳಿದಾಸ’ನಿಗೆ ಜೀವ ಕೊಡಲು ಎಷ್ಟು ಮಂದಿ ’ಭೋಜರಾಜ’ರು ಸಿದ್ದವಾಗುತ್ತಿದ್ದರೋ ಏನೋ?

’ನಾನಿರುವುದೆ ನಿಮಗಾಗಿ ನಾಡಿರುವುದು ನಮಗಾಗಿ’ ಎಂದು ಎಲ್ಲರ ಹೃದಯ ಕದಿಯುತ್ತಾ ’ಹಾಲಲ್ಲಾದರು ಹಾಕು ನೀರಲ್ಲಾದರೂ ಹಾಕು’ ಎಂದು ಅಭಿಮಾನಿಗಳಲ್ಲೇ ದೇವರನ್ನು ಕಂಡು, ’ಕಣ್ಣಪ್ಪ ಕೊಟ್ಟನು ಕಣ್ಣನು, ನಮ್ಮಪ್ಪಾ ಕೊಡುವೆನೆ ನನ್ನನು ’ ಎಂದು ದೇವನಿಗೆ ನೀನೇ ಅರ್ಪಿಸಿಕೊಂಡು, ಅಭಿಮಾನಿಗಳು ’ರವಿ ನೀನು ಆಗಸದಿಂದ ಮರೆಯಾಗಿ ಹೋಗದೆ ನಿಲ್ಲು’ ಎಂದು ಹಾಡುವಂತೆ ಮಾಡಿದ್ದು ಸರಿಯೇ?

’ಕಣ್ಣಪ್ಪ’ನಾಗಿ ಇಬ್ಬರಿಗೆ ’ಎರಡು ನಕ್ಷತ್ರಗಳು’ ಆದ ನೇತ್ರಗಳನ್ನು ದಾನ ಮಾಡಿ ಅವರ ಜೀವನದಲ್ಲಿ ’ಹೊಸ ಬೆಳಕು’ ಕೊಟ್ಟು, ಚೈತ್ರಮಾಸದಿ ’ಜೀವನ ಚೈತ್ರ’ ಕಾಣುವುದ ಬಿಟ್ಟು ’ಸಂಧ್ಯಾ ರಾಗ’ ಹಾಡಿ ’ಚಲಿಸುವ ಮೋಡಗಳ’ ಮಧ್ಯೆ ಕೈಗೆಟುಕದ ’ಕಾಮನಬಿಲ್ಲು’ ಆದೆಯಾ? ನೂರು ವರ್ಷ ಬಾಳಿದವರ ಕೂಟಕ್ಕೆ ’ಅಪೂರ್ವ ಸಂಗಮ’ವಾಗುವುದು ನಿನಗೆ ಬೇಕಿರಲಿಲ್ಲವೇ?

ನಿನ್ನ ಜೀವನ ’ಒಂದು ಮುತ್ತಿನ ಕಥೆ’. ಕನ್ನಡಿಗರೆಲ್ಲ ನಿನ್ನ ’ಒಡಹುಟ್ಟಿದವರು’.

’ಬಂಗಾರದ ಮನುಷ್ಯ’ನಿಗೆ ’ಗಂಧದ ಗುಡಿ’ಯ ’ಒಡಹುಟ್ಟಿದವರು’ ಮಾಡಿಕೊಳ್ಳುವ ಪ್ರಾರ್ಥನೆ ಏನೆಂದರೆ ಪರಮಾತ್ಮನು ಅವರ ಆತ್ಮಕ್ಕೆ ಶಾಂತಿ ನೀಡಲಿ, ಬಂಧುವರ್ಗದವರಿಗೆ ತುಂಬಲಾರದ ನಷ್ಟವನ್ನು ಭರಿಸಿಕೊಳ್ಳುವ ಶಕ್ತಿ ನೀಡಲಿ ಎಂದು.

ಕೋಗಿಲೆಯು ಚೈತ್ರದಲ್ಲಿ ಮಾವಿನ ಚಿಗುರನ್ನು ತಿಂದು ಹಾಡುವ ಈ ದಿನಗಳಲ್ಲಿ ’ಗಾನಕೋಗಿಲೆ’ ಮರೆಯಾಗಿದ್ದು ಎಂತಹ ಕಠೋರ ಸತ್ಯ. ’ವ್ಯಯ’ ಸಂವತ್ಸರದ ಆರಂಭದಲ್ಲೇ ಭರಿಸಲಾರದ ನಷ್ಟವಾಗಿರುವುದು ವಿಪರ್ಯಾಸವೇ ಸರಿ. ಅಲ್ಲವೇ?

–ಶ್ರೀನಾಥ್ ಭಲ್ಲೆ

## ಶ್ರದ್ಧಾಂಜಲಿ :

We are sad to inform you that **Dr. Guru Shanthappa Ettigi**, Father of Sri. Prakash Ettigi, passed away during the early hours of 13th January in Richmond. Sri. Guru Shanthappa was a Psychiatrist by profession and 86 years old. He leaves behind a loving family, relatives and a number of friends. He worked in India as a Superintendent in Bangalore Mental Hospital and later as Superintendent in Dharwar Mental Hospital. He retired as Dy. Director of Dept. of Medical Education of Karnataka. He moved to USA to join his Son Prakash and Daughter Meera in 1985.

We are sad to inform you that **Mr. M R Nagaraj**, elder brother of Mrs. Rama Pandurangi, passed away on 22nd January in Banglore at the age of 75. He was a like a father figure to her, as she had lost her father when she was only 3 years old.

RKS joins Ettigi and Pandurangi family in their hour of grief and pray to the almighty that the departed souls rest in peace.

ಆರೋಗ್ಯ ಭಾಗ್ಯ:

**ANGIOPLASTY, STENTS, CORONARY BYPASS SURGERY & OTHER THERAPIES**

This 4th article on Cholesterol will address the minimally invasive and invasive modalities of therapy.

**CARDIAC OR HEART CATHETERIZATION - available since early 1960's**:- Cardiac or heart catheterization is required to diagnose coronary artery blockages. It involves threading a narrow long tube called catheter usually through a large groin artery under local anesthesia followed by injection of iodine based dye to visualize the coronary arteries. This procedure reveals the extent and severity of coronary artery blockages, strength or damage to the heart muscle as a result of blockages allowing one to customize the appropriate future therapy. This is usually a same day procedure and requires a 6 hour stay including the procedure time.

**ANGIOPLASTY- available since mid 1980's:** Angioplasty is the therapeutic aspect of Cardiac or heart catheterization. After catheterization, through the catheter, a thin wire (0.35mm in thickness) is advanced into the coronary artery & placed past the blocked area. Using this wire as a rail, a polyethylene balloon that is about 1 ½ mm diameter, 1- 2 cm long is then threaded and placed at the site of blocked artery. The blockage is "cracked" open by inflating the balloon, thus allowing more blood flow and relief of angina or chest pain. The balloon, thin wire and the catheter are then withdrawn. The procedure usually requires an overnight stay, is quite safe and one gets back to work usually in a couple of days. It does improve the quality of life for a vast majority of patients, at least for a while.

Disadvantages: Abrupt collapse of the soft tissues after balloon withdrawal was a major problem, occurring in 1 in 10 requiring emergency bypass surgery. In the rest, the blockage reoccurred in about half the patients within 6 months due to overgrowth of the scar tissue. Despite its obvious disadvantages, angioplasty was minimally invasive compared to bypass surgery and a major step forward in treating this disease.

**STENTS - available since 1992:** These are small ballpoint pen spring-like stainless steel cylindrical tubes mounted on the angioplasty balloon. After the balloon stretches the blockage, the stent is left inside the artery. This "holds" the inside of the artery from collapsing on itself preventing the need for emergency bypass surgery after an angioplasty. The artery "heals" incorporating the stent over the next 30 – 45 days. The stents solved a major problem with angioplasty i.e. abrupt closure of soft tissues that hitherto necessitated bypass surgery.

Disadvantages: The stainless steel stents left inside artery provokes a healing response over the next 3 months resulting in "too" much scar tissue which ends up blocking the artery. So now, instead of a cholesterol blockage – "cancer-like" scar tissue growth causes obstruction and leads to angina. This happens in 1 in 3 patients i.e. 33%. Until recently, when this occurred, we had no choice but to go back in again and stretch the new blockage inside the stent. If it recurred again, we then tried radiation therapy and in some cases bypass surgery. Well, modern medicine came to our rescue once more. We now have,

**DRUG COATED STENTS - available since 2003:** These stents have a small amount of anti-cancer medicine coated on them, which prevents the overzealous healing and scarring inside the stent. These stents are able to do what several other technologies like atherectomy and radiation therapy failed to do. They reduced the obstructive scar tissue growth significantly so much that now only 1 in 20 has to make a return trip to get the blockage opened up again. A huge improvement as blockage recurrence rates fell from 50% to 5% in fewer than 20 yrs. There are two drug coated stents widely used all over the world, Cypher stent from Johnson and Johnson and Taxus stent made by Boston Scientific. Nearly 85% of all stents implanted today are drug coated stents. The usage rates in Europe are about 55%, due to socialized medicine and budgets.

Patients need to take both aspirin and plavix - blood thinners after these stents are placed to prevent clot formation in these stents. Aspirin is continued indefinitely. Plavix is usually required for 3 - 6 months after the stents are implanted, as the anti-cancer medicine is released slowly over 1 to 3 months from these stents into the artery. As you can guess, the improvement in the quality of life & impact due to prevention of heart attacks are huge! This procedure has been so successful, that growth rates in bypass surgery has not only halted but are declining rapidly all over the world! Thanks, to these two American companies.

**CORONARY ARTERY BYPASS SURGERY – available since late 1960's:** This involves surgically "bypassing" the arterial blockages with (several veins taken from the leg) and an artery taken from the chest wall. New conduits to carry the blood to the heart are then sewed by the surgeon connecting the main blood vessel – aorta and the coronary artery past the area of blockage. As obvious, procedure requires major open heart surgery, convalescence is measured in weeks to months and morbidity is quite substantial. Fortunately, newer developments in bypass surgery have led to less invasive and band-aid type smaller scars.

Despite the " obvious invasive-ness", surgery is life-saving in many instances, as these patients, cannot have stents placed due to technical reasons (such as complete 100% blockages, numerous blockages, snake like curvy arteries, calcium deposits and a combination of several reasons). However, these bypasses last only 15-20 years, before too they become clogged.

**OTHER THERAPIES:** Laser therapy has had its ups and downs. It has come and gone, again and again. What we now find useful, on a day to day basis, is the concurrent use of laser at the time of bypass surgery for those areas of the heart where the coronary arteries are so badly (and diffusely) blocked up that neither bypass nor stents are an option. Such blockages are seen very frequently in poorly controlled diabetics and people of South Asian descent. Laser, therefore, is only useful as a supplement rather than primary therapy.

This brings us to the basic issue that all of the above procedures address only the segment of the coronary artery that is blocked. New blockages continue to develop elsewhere in these arteries unless life style changes of prudent diet & daily exercise are maintained all life long! Secondly, and more importantly, even after these procedures, patients need to take lifelong medications to keep the blockages at bay.

All in all, from a bird's eye view, there have been tremendous improvements both in the quality and duration of life for these patients. For example, in the early 60's, when one had a heart attack the family and the society expected the person to retire and not be surprised if he/she succumbed to it. Why? Because the prevalence of death within 30 days, after the heart attack, was a whopping 35%, i.e. 1 in 3! Today, the same 30 day mortality is 5% i.e. 1 in 20. In other words, the paradigm has shifted - instead of dying; people expect to live a productive life after a heart attack! That is progress and makes practice of medicine gratifying.

This completes the series of articles regarding cholesterol and coronary artery disease.

Ashok Kumar MD

Have a comment, feedback, questions or a suggestion for future topics?
Contact: - klashokkumar2000@yahoo.com.

## ಹಬ್ಬ-ಹಬ್ಬ ಸಡಗರದ ಹಬ್ಬ:

ಯುಗದ ಆದಿಯನ್ನು ಯುಗಾದಿ ಅಥವಾ ಉಗಾದಿ ಎಂದು ಕರೆಯುತ್ತಾರೆ. ಹೋಳಿಯ ಬಣ್ಣ ಕರಗುತ್ತಿರುವಂತೆ ನವವಸಂತದ ಗಾಳಿ ಬೀಸುತ್ತಾ ಚೈತ್ರದ ಆಗಮನವನ್ನು ಮಧುರವಾಗಿ ತಿಳಿಸುತ್ತದೆ. ಎಲ್ಲೆಲ್ಲೂ ನಳನಳಿಸುವ ಚಿಗುರು, ಹೂಗಳು ಮನೋಲ್ಲಾಸ ನೀಡುತ್ತದೆ.

ಚೈತ್ರ ಶುದ್ಧ ಪಾಡ್ಯವು ಉಗಾದಿಯ ಪವಿತ್ರ ದಿನ. ಹಿಂದೂಗಳ ಹೊಸವರ್ಷದ ಮೊದಲ ದಿನ ಈ ಯುಗಾದಿ. ಚತುರ್ಮುಖ ಬ್ರಹ್ಮನು ತನ್ನ ಸೃಷ್ಟಿಯ ಕಾರ್ಯವನ್ನು ಈ ದಿನ ದಿಂದ ಆರಂಭ ಮಾಡಿದನೆಂದು ನಂಬಿಕೆಯಿದೆ.

ಚಳಿಗಾಲದಿ ಎಲೆಗಳನ್ನು ಕಳೆದುಕೊಂಡು ಬೋಳಾಗಿದ್ದ ಗಿಡ ಮರಗಳು ಹೊಸ ಚಿಗುರನ್ನು ಪಡೆದು ಎಲ್ಲರ ಮನಸ್ಸನ್ನು ಸಂತೋಷಪಡಿಸುವ ವಸಂತ ಋತುವಿನ ಮೊದಲ ಮಾಸ ಚೈತ್ರ ಮಾಸ. ಎಲ್ಲೆಲ್ಲೂ ಹಸಿರು. ಎಲ್ಲವೂ ಹೊಸತು. ಬಿಳಿಯ ಮೈಸೂರು ಮಲ್ಲಿಗೆಯ ಕಂಪಿನ ಜೊತೆ ಹಸಿರು ಮಾವಿನ ಕಾಯಿಯ ಸುವಾಸನೆಯೂ ಸೇರಿ ಮ ನಸ್ಸಿಗೆ ಮುದ ನೀಡುತ್ತಾ, ಚಳಿಗೆ ಮನೆಯಲ್ಲೇ ಬೆಚ್ಚಗೆ ಕುಳಿತಿದ್ದ ಜೀವಾತ್ಮಗಳನ್ನು ಮನೆಯಿಂದ ಹೊರಗೆಳೆದು ತರುವಲ್ಲಿ ಯಶಸ್ವಿಯಾಗುತ್ತದೆ.

ಹೊಸ ವರ್ಷದ ಮೊದಲ ದಿನವಾದ ಚಾಂದ್ರಮಾನ ಉಗಾದಿಯಂದು 'ಪಂಚಾಂಗ ಶ್ರವಣ' ನೆಡೆಯುತ್ತದೆ. ಇದು ಆ ವರ್ಷದಲ್ಲಿ ಯಾವ ರಾಶಿಯು ಯಾವ ರೀತಿಯ ಫಲಾ ಫಲಗಳನ್ನು ಹೊಂದಿರುತ್ತವೆ ಎಂಬುದರ ಸೂಕ್ಷ್ಮ ಪರಿಚಯ.

ಹೊಸ ವರುಷಕೆ ಹೊಸ ಹರುಷವ ತರಲು ಹಸಿರು ಮಾವು ಪರಿಮಳ ಚೆಲ್ಲಿದರೆ, ಸೊಂಪಾಗಿ ಬೆಳೆದ ಬೇವು ಗಾಳಿಯನ್ನು ಶುದ್ಧ ಮಾಡುತ್ತದೆ. ಇದಲ್ಲದೆ ಹೊಸ ಬೆಳೆಯಿಂದ ತಯಾರಿಸಿದ ಬೆಲ್ಲವಂತೂ ಬಾಯಿ ಸಿಹಿ ಮಾಡಲು ಸಿದ್ದವಾಗಿರುತ್ತದೆ. 'ಉಗಾದಿ ಪಚ್ಚಡಿ' ಎಂದೇ ಪ್ರಖ್ಯಾತವಾದ ತಿನಿಸು ಉಗಾದಿಯ ಹಬ್ಬದ ಸಂಕೇತವೇ ಆಗಿದೆ. ಈ ತಿನಿಸಿ ನಲ್ಲಿ ಮಾವು, ಬೇವು, ಬೆಲ್ಲ ಹಾಗೂ ಹುಣಿಸೆ ಇದ್ದು ಜೀವನದ ಸಿಹಿ-ಕಹಿ-ಹುಳಿಯನ್ನು ಪ್ರತಿಬಿಂಬಿಸುತ್ತದೆ. ಜೀವನದಲ್ಲಿ ಎಲ್ಲವನ್ನೂ ಸಮನಾಗಿ ಸ್ವೀಕರಿಸಿ ಎಂಬ ಸಂದೇಶವ ನ್ನೂ ತಲುಪಿಸುತ್ತದೆ

ಎಲ್ಲೆಲ್ಲೂ ಹೊಸ ಬಟ್ಟೆಯನ್ನು ಧರಿಸಿ ಹೊಸ ಸಡಗರದಿಂದ ಬರ ಮಾಡಿಕೊಳ್ಳುವ ಈ ಹಬ್ಬವನ್ನು ಕರ್ನಾಟಕ ಹಾಗೂ ಆಂಧ್ರದಲ್ಲಿ 'ಉಗಾದಿ' ಎನ್ನುತ್ತಾರೆ, ಮಹಾರಾಷ್ಟ್ರದಲ್ಲಿ 'ಗುಡಿಪಡವ' ಎನ್ನುತ್ತಾರೆ.

ಸೆಗಣಿ ಹಾಕಿ ಮನೆಯ ಮುಂದಿನ ನೆಲ ಸಾರಿಸಿ, ರಂಗವಲ್ಲಿ ಇಟ್ಟು, ತೋರಣ ಕಟ್ಟಿ, ಕಳಸ ಪೂಜೆ ಮಾಡುವುದು ಎಲ್ಲರ ಮನೆಗಳಲ್ಲಿ ಕಾಣಬಹುದಾದ ಸಾಮಾನ್ಯ ನೋಟ. ಬೆಲ್ಲ ಹಾಕಿ ಮಾಡಿದ ಹೂರಣದ ಹೋಳಿಗೆ ಈ ಹಬ್ಬದ ವಿಶೇಷ ಸಿಹಿ ತಿನಿಸು.

ದ.ರಾ.ಬೇಂದ್ರೆ ರಚಿತ ಈ ಉಗಾದಿಯ ಹಾಡು ಯಾರು ತಾನೇ ಕೇಳಿಲ್ಲ ?

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಶವ ಹೊಸತು ಹೊಸತು ತರುತಿದೆ

ಹೊಂಗೆ ಹೂವ ತೊಂಗಲಲ್ಲಿ ಭೃಂಗದ ಸಂಗೀತ ಕೇಲಿ ಮತ್ತೆ ಕೇಳಬರುತಿದೆ
ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವಕಳೆಯ ತರುತಿದೆ

ವರುಷಕೊಂದು ಹೊಸತು ಜನ್ಮ ಹರುಶಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ
ಒಂದೆ ಒಂದು ಜನ್ಮದಲಿ ಒಂದೆ ಬಾಲ್ಯ ಒಂದೆ ಹರಯ ನಮಗದಷ್ಟೇ ಏತಕೋ

ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ
ಎಲೇ ಸನತ್ಕುಮಾರದೇವ ಎಲೇ ಸಾಹಸಿ ಚಿರಂಜೀವ ನಿನಗೆ ಲೀಲೆ ಸೇರದೋ

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ ನಮ್ಮನಷ್ಟೆ ಮರೆತಿದೆ

-ಶ್ರೀನಾಥ್ ಭಲ್ಲೆ

## ಗಾಸಿಪ್ಪಿನ ಗುಂಡಿ:

ನಾನು ಕಂಡ ಕೆಲವು ಕುಟುಂಬಗಳಲ್ಲಿ ಕಾಣಬರುವ ಸಾಮಾನ್ಯ ಸನ್ನಿವೇಶ ಈ ರೀತಿ ಇದೆ. ಬಹುಶ: ಅದು ಈಗಿನ ಸಮಾಜವನ್ನು ಪ್ರತಿಬಿಂಬಿಸುತ್ತದೆ.

– ಏಳು ಘಂಟೆಯಾದರೆ ಟಿವಿ ಮುಂದೆ ಕುಳಿತು ಬಿಡುತ್ತಾರೆ. ಮಕ್ಕಳೂ ಸಹ.

– ರೂಮಿಗೆ ಒಂದೊಂದು ಟಿವಿ. ಹಾಲಿನಲ್ಲಿರುವ ಟಿವಿ 'ಉದಯ' ಮಾತ್ರ. ಮೊದಲ ರೂಮಿನಲ್ಲಿ 'ಈ–ಟಿವಿ' ಮಾತ್ರ. ಮತ್ತೊಂದು ರೂಮಿನಲ್ಲಿ 'ಕಾರ್ಟೂನ್ ನೆಟ್ ವರ್ಕ್' ಮಾತ್ರ. ನ್ಯೂಸ್ ಬಂದಾಗ ಟಿವಿ ಬಂದ್ !!

– ಏಳು ಘಂಟೆಯಿಂದ ಒಂಬತ್ತರವರೆಗೆ ಯಾವುದಾದರೂ ಅತಿಥಿಗಳು ಬಂದರೆ ಅವರಿಗೆ ಸರಿ ಹೋಗುವುದಿಲ್ಲ.

– ಯಾರು ಯಾವಾಗ ಮನೆಗೆ ಬರುತ್ತಾರೋ ಅವರು ಟಿವಿ ಮುಂದೆ ತಟ್ಟೆಯನ್ನು ಕೈಯಲ್ಲಿ ಹಿಡಿದು ಊಟ ಮಾಡುತ್ತಾರೆ. ಮನೆ ಬಹಳ ಶಾಂತವಾಗಿರುತ್ತದೆ ಯಾಕೆಂದರೆ ಒಬ್ಬರಿಗೊಬ್ಬರು ಮಾತಾಡಿದರೆ ಟಿವಿಯಲ್ಲಿ ಬರುವ ಸಂಭಾಷಣೆ ಕೇಳಿಸುವುದಿಲ್ಲ !!!

– ಐಟಿ ಜನವಂತೂ ಬಿಡಿ. ಯಾವಾಗ ಕೆಲಸಕ್ಕೆ ಹೋಗುತ್ತಾರೋ ಯಾವಾಗ ಮನೆಗೆ ಬರುತ್ತಾರೋ ಅವರಿಗೇ ತಿಳಿಯದು. ಅವರಿಗೆ 'ಆಫೀಸೇ ಮಂತ್ರಾಲಯ ಆಫೀಸೇ ದೇವಾಲಯ, ಬಾಸ್ ದೇವರು'

ಐಟಿ ಜನ ಇತ್ತೀಚೆಗೆ ಹೆಚ್ಚು ಮಾನಸಿಕ ರೋಗಿಗಳಾಗುತ್ತಿದ್ದಾರೆ. ಅವರ ಜೀವನವೇ ಟೆನ್ಷನ್. ಮಕ್ಕಳು, ಮಡದಿಯೊಡನೆ ಕೂಡಿ ಕಾಲ ಕಳೆವುದು ಬಹಳ ಕಡಿಮೆ. ಇನ್ನು ಒಟ್ಟಿಗೆ ಕೂತು ಊಟ ಮಾಡುವುದನ್ನು ಇವರಿಂದ ನಿರೀಕ್ಷಿಸಲು ಸಾಧ್ಯವೇ?

ಇದೆಲ್ಲಕ್ಕಿಂತ ಮಿಗಿಲಾಗಿ ನೀವು ಬರೆದಿರುವ ಇಂತಹ ಉತ್ತಮ ಅಂಶಗಳನ್ನು ಓದುವ ವ್ಯವಧಾನವಾದರೂ ಎಲ್ಲಿದೆ?

--------

ಹಿರಿಯರು ಹೇಳುತ್ತಾರೆ 'ಹೊಗಳಿ ಹೊನ್ನ ಶೂಲಕ್ಕೇರಿಸದಿರಿ' ಎಂದು. ಈಗಿನ ಕಾಲದಲ್ಲಿ ನಾವೇ ಹೊಗಳಿಕೊಳ್ಳದಿದ್ದಲ್ಲಿ ಅಥವಾ ಬೇರೆಯವರು ನಮ್ಮನ್ನು ಹೊಗಳದಿದ್ದಲಿ ಕೆಲಸ ಆಗುವುದಿಲ್ಲ. ಸತ್ತವರಿಗಾಗಿ ಅಳಲು ರುಡಾಲಿಗಳಿದ್ದ ಹಾಗೆ ಬದುಕಿರುವವರನ್ನು ಹೊಗಳಲು ಈ ಭಟ್ಟಂಗಿಗಳು ಎಂದು ನನಗೆ ಎಷ್ಟೊ ಬಾರಿ ಅನ್ನಿಸಿದೆ. ಈ ಸ್ವಯಂ ಹೊಗಳಿಕೊಳ್ಳುವುದು ಒಂದು ಜಾಡ್ಯ ಇದ್ದ ಹಾಗೆ. ಅವರು ಎಲ್ಲೇ ಇರಲಿ ತಮ್ಮದೇ ದೊಡ್ಡದು ಎನ್ನುವ ಹಾಗೆ ಮಾತನಾಡುತ್ತಾ ಬೇರೆಯವರ ತಲೆ ತಿನ್ನುತ್ತಾರೆ. ಐ.ಟಿ ಜಗತ್ತಿನಲ್ಲಿ ಇದನ್ನು 'self appraisal' ಎಂದೂ ಅನ್ನುತ್ತಾರೆ.

ಹೊಗಳಿಕೆಯ ಬಗ್ಗೆ ಹೀಗೊಂದು ಕಥೆ ಇದೆ. ಹೊಸ ಸೇತುವೆ ಕಟ್ಟುವ ಕೆಲಸ ಮುಗಿದಾಗ ಅದನ್ನು ಪರಿಶೀಲಿಸಲು ರಾಜ್ಯದ ಮಂತ್ರಿಗಳು ಬರುತ್ತಾರೆ. ಕೆಲಸ ನೋಡಿದ ಮೇಲೆ 'ಏನೋ ಎಡವಟ್ಟಾಗಿದೆ. ಅದಕ್ಕೆ ಕಾರಣರಾದವರನ್ನು ಕರೆಸಿ' ಎಂದು ಅಪ್ಪಣೆ ಮಾಡುತ್ತಾರೆ. ಪ್ರತಿ ಒಬ್ಬರೂ 'ನಾನಲ್ಲಾ, ತಾನಲ್ಲಾ' ಎಂದು ಜಾರಿಕೊಳ್ಳುತ್ತಾ ಕಡೆಗೆ ಸೇತುವೆಗೆ ಮೂಲ ಕಾರಣನಾದವನನ್ನು ಮಂತ್ರಿಗಳ ಮುಂದೆ ನಿಲ್ಲಿಸುತ್ತಾರೆ. ಆಗ ಮಂತ್ರಿಗಳು ಅವನಿಗೆ 'ಕೆಲಸ ಚೆನ್ನಗಿದೆ ಅಂತ ನಾನು ಹೇಳಿದ್ದರೆ ಅದನ್ನು ತಾವೇ ಮಾಡಿದ್ದು ಎಂದು ಹೊಗಳಿಕೊಳ್ಳುವ ಮಂದಿ ಹಲವಾರು ಇರುತ್ತಾರೆ. ಅದಕ್ಕೇ ಕೆಲಸ ಕೆಟ್ಟಿದೆ ಎಂದೆ. ನಿಜಕ್ಕೂ ನೀನು ಮಾಡಿರುವ ಈ ಸೇತುವೆ ಕೆಲಸ ಅದ್ಭುತವಾಗಿದೆ, ಭೇಷ್!' ಎಂದರು. ಎಷ್ಟೋ ಬಾರಿ ಸ್ವಯಮ್–ಹೊಗಳಿಕೊಳ್ಳುವ ಮಂದಿಗಳಿಂದ ನಿಜವಾದ ಕೆಲಸಗಾರ ಕಣ್ಣಿಗೆ ಕಾಣಿಸುವುದೇ ಇಲ್ಲ.

ಈ ಸ್ವಯಂ ಹೊಗಳಿಕೊಳ್ಳುವವರು ಬೇರೆಯವರು ತಮ್ಮ ಬಗ್ಗೆ ಹೇಳಿಕೊಳ್ಳುವಾಗ ಕೇಳಿಸಿಕೊಳ್ಳುವುದಿಲ್ಲ. ಎಲ್ಲಿ ಅವರು ತಮಗಿಂತ ಮುಂದೋ ಎನ್ನುವ ಒಂದು ಭಯ ಇರಬೇಕು ಅನ್ನಿಸುತ್ತದೆ.

-----

ಇತ್ತೀಚೆಗೆ ಅದರಲ್ಲೂ ಜನವರಿ ತಿಂಗಳಲ್ಲಿ ಹಲವಾರು ಜನ ತಮ್ಮ ಬಂಧು ವರ್ಗದಲ್ಲಿ ಆದ ನಷ್ಟದ ಬಗ್ಗೆ ತಿಳಿಸಿದರು. ನಮ್ಮ ಸಮೀಪ ಬಂಧುವರ್ಗಲ್ಲಿಯೂ ಹೀಗೆ ಕೆಲವು ನಷ್ಟಗಳು ಸಂಭವಿಸಿತು. ಆಗ ನಾನು 'ಕಾಲ' ಎಂಬ ಪದವನ್ನು ಮೂರು ಅರ್ಥದಲ್ಲಿ ಉಪಯೋಗಿಸಿ ಬರೆದ ಕವಿತೆ:

ಕಾಲನಿಗೆ ಇಲ್ಲ ಇಂಥದೇ ಕಾಲ
ಕಾಲನಾ ಭಯವಿಹುದು ಮನಕೆ ಸದಾ ಕಾಲ
ಕಾಲನು ಇಟ್ಟರೆ ಮನೆಯಲ್ಲಿ ಕಾಲ
ಕಾಲನಾ ನೆನಪುಳಿವುದು ನಮಗೆ ಚಿರಕಾಲ

ಕಾಲನಾ ಕರೆಯಿದು
ಕಾಲ್ waiting ಇಡುವಂತಿಲ್ಲ
ಕಾಲ್ ತೆಗೆಯಲೇಬೇಕು ಲೋಕದಿಂದ
ಕಾಲನ ಕೆಲಸವು ನಿರ್ವಿಘ್ನ

ರಿಚ್ಮಂಡ್ ಕನ್ನಡ ಸಂಘದ ಕನ್ನಡಿಗರ ಮನೆಯಲ್ಲಿ ಆದ ನಷ್ಟಕ್ಕೆ 'ಹೂಬನ'ದ ಕಡೆಯಿಂದ ವಿಷಾದ ಅರ್ಪಿಸುತ್ತೇವೆ. ಭಗವಂತನು ಸತ್ತವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸುತೇನೆ.

–ಶ್ರೀನಾಥ್ ಭಲ್ಲೆ

## ಚೈತ್ರದ ಚಿಗುರು :

A Rose by Any Other Name…………..Is Still a Rose!!!

I like my name but as a kid growing up in America, my name was…how shall I put it………very unique! How many other "Latha's" were floating around a small West Virginian high school in the 1970s? As a result, I was called everything else but my name. How does "lather, latta, lotta….." sound to you? Even the teachers would stare point blank at the roster when they came to my name. After I explained the pronunciation to them, they would still get it wrong. I would just give up after the 10th attempt and just resign myself to having my name pronounced a half a dozen "ways.

I wanted to change my name. It would have been fun to be "Laura, Lizzie, Lana,"………anything but this foreign sounding name that I possessed. I wanted to walk into a tourist place and casually pick up my name on a license plate, keychain etc. "Latha" would never be printed on a t-shirt or a hat, or sewn onto a bag. It would never happen!

If names were too long or too difficult to say, Indians would instantly "anglicize" them. "My name is Shantaram but you can call me Sam!" Nikhil would become Nicky or Rohini would become Robin. Then there were some kids who already had user friendly names. Kids who had names such as Tina, Sheila or Neil etc were a sure fire hit because they didn't have to do anything to their names. Their friends could never get their name wrong.

If first names are a challenge, last names are even harder. Some last names of Indians can run into 10 letters or longer. Before e-mails, we had to send out telegrams by Western Union. Try saying your last name to an operator. We had to spell out each letter and use descriptions as well. "My last name is Gupta, G as in grape, U as in unicorn…….!" Needless to say, when we were done, the telephone operator was very confused and my parents were very frustrated!

I've run across some European names that are longer and more difficult to say than my name. Some ethnic names from Poland or other Eastern European countries are quite challenging. Yet it is the familiarity of the names that mean more. If they happen to be world famous tennis players or ballet dancers, then their names are on the tips of everyone's tongues. It's refereshing now to see that everyone knows M. Night Shymalan even if his name is not the run of the mill kind. Indians are making progress!

A topic of contention is this first name and last name business. Lots of Indians don't really have last names because their last names are hidden in some initials. Their first name often becomes their last name. That is kind of confusing especially when Indian immigrants come to America. What to put for a last name? Never had one in their life.

It would be interesting to trace an Indian's family tree because last names just aren't consistent. Of course, if you can find authentic birth certificates for family members…………well good luck on that one. This is the reason why my son never picked the family tree project in middle school. Not only would it be downright challenging it would be impossible!

When it came time to pick out names for my own two kids, I went with something easy and simple. With names like Mala and Kiran, they don't have too many problems yet there are those that will not get it right. I guess you can't please everyone!!!

- Latha Kumar

**ಮುಂಬರುವ ಚಟುವಟಿಕೆಗಳು:**

Upcoming program of RKS:

**ಯುಗಾದಿಯ ಆಮಂತ್ರಣಕ್ಕೆ ಈ ಲಿಂಕಿನ ಮೇಲೆ ಕ್ಲಿಕ್ಕಿಸಿ :**

http://thatskannada.oneindia.in/chowchow/festivals/ugadi/220406richmond.html

**RKS ಜೂನ ತಿಂಗಳಿನಲ್ಲಿ ಪಿಕ್ ನಿಕ್ ಆಯೋಜಿಸಿದೆ. ಇಷ್ಟರಲ್ಲೇ ಎಲ್ಲ ಮಾಹಿತಿಯನ್ನು ತಿಳಿಸುತ್ತೇವೆ.**